All India Radio: Bangalore
National Bulletin In Kannada
27.07.2025 19.35 p.m.
ಆಕಾಶವಾಣಿ, ಬೆಂಗಳೂರು
ರಾಷ್ಟ್ರೀಯ ವಾರ್ತೆಗಳು

ಮುಖ್ಯಾಂಶಗಳು

- 'ವೋಕಲ್ ಫಾರ್ ಲೋಕಲ್' – ಸ್ವಾವಲಂಬಿ ಭಾರತದ ಆಧಾರ ; ಮನದ ಮಾತಿನಲ್ಲಿ ಪ್ರಧಾನಿ ನರೇಂದ್ರ ಮೋದಿ
- ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ಪ್ರಶ್ನಿಸಿ ಅರ್ಜಿ ; ನಾಳೆ ಸುಪ್ರೀಂಕೋರ್ಟ್‌ನಲ್ಲಿ ವಿಚಾರಣೆ
- ಹರಿದ್ವಾರದ ಮಾನ್ಸಾ ದೇವಿ ದೇಗುಲದಲ್ಲಿ ಕಾಲ್ತುಳಿತ ; ಕನಿಷ್ಠ ೭ ಮಂದಿ ಸಾವು, ೨೦ ಜನರಿಗೆ ಗಾಯ
- ಟೆಸ್ಟ್ ಕ್ರಿಕೆಟ್ ; ಡ್ರಾ ಹಾದಿಯತ್ತ ಭಾರತ-ಇಂಗ್ಲೆಂಡ್ ನಡುವಿನ ೪ನೇ ಪಂದ್ಯ

<><><><>

೨೧ನೇ ಶತಮಾನದ ಭಾರತದಲ್ಲಿ, ವಿಜ್ಞಾನ ಹೊಸ ಶಕ್ತಿಯೊಂದಿಗೆ ಮುನ್ನಡೆದಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ೧೨೪ನೇ ಆವೃತ್ತಿಯ 'ಮನ್ ಕಿ ಬಾತ್' ಕಾರ್ಯಕ್ರಮದಲ್ಲಿಂದು ಸಮಸ್ತ ಭಾರತೀಯರನ್ನುದ್ದೇಶಿಸಿ ಮಾತನಾಡಿ ಪ್ರಧಾನಿ, ವಿಜ್ಞಾನ, ಕ್ರೀಡೆ, ಭಾರತೀಯ ಪರಂಪರೆ, ಸ್ವಾತಂತ್ರ್ಯ ಹೋರಾಟ, ಪಕ್ಷಿಗಣತಿ ಸೇರಿದಂತೆ ವಿವಿಧ ವಿಷಯಗಳನ್ನು ಪ್ರಸ್ತಾಪಿಸಿ, ಭಾರತ ತೀವ್ರಗತಿಯಲ್ಲಿ ಪ್ರಗತಿ ಹೊಂದುತ್ತಿರುವುದಾಗಿ ತಿಳಿಸಿದರು. ಜವಳಿ ಭಾರತದ ಕೇವಲ ಒಂದು ವಲಯ ಮಾತ್ರವಲ್ಲ. ಇದು ನಮ್ಮ ಸಾಂಸ್ಕೃತಿಕ ವೈವಿಧ್ಯತೆಗೆ ಒಂದು ಪ್ರತಿಬಿಂಬವಾಗಿದೆ. ಇಂದು ಜವಳಿ ಮತ್ತು ಸಿದ್ಧ ಉಡುಪುಗಳ ಮಾರುಕಟ್ಟೆ ಬಹಳ ವೇಗವಾಗಿ ಬೆಳೆಯುತ್ತಿದೆ ಮತ್ತು ಈ ಬೆಳವಣಿಗೆಯ ಅತ್ಯಂತ ಅದ್ಭುತವಾದ ವಿಷಯವೆಂದರೆ - ಹಳ್ಳಿಗಳ ಮಹಿಳೆಯರು, ನಗರಗಳ ವಿನ್ಯಾಸಕರು, ವೃದ್ಧ ನೇಕಾರರು ಮತ್ತು ಯುವ ಉದ್ಯಮಿಗಳು ಒಟ್ಟಾಗಿ ಇದನ್ನು ಮುಂದಕ್ಕೆ ಕೊಂಡೊಯ್ಯುತ್ತಿದ್ದಾರೆ ಎಂದರು. ಇಂದು ಭಾರತದಲ್ಲಿ ೩ ಸಾವಿರಕ್ಕೂ ಹೆಚ್ಚು ಜವಳಿ ನವೋದ್ಯಮಗಳು ಸಕ್ರಿಯವಾಗಿವೆ. ಅನೇಕ ನವೋದ್ಯಮಗಳು ಭಾರತದ ಕೈಮಗ್ಗಕ್ಕೆ ಜಾಗತಿಕ ಮನ್ನಣೆ ದೊರೆಯುವಂತೆ ಮಾಡಿವೆ. ೨೦೪೭ ರ ಅಭಿವೃದ್ಧಿ ಹೊಂದಿದ ಭಾರತದ ಪಥವು

ಸ್ವಾವಲಂಬನೆಯ ಮೂಲಕ ಹಾದು ಹೋಗಲಿದೆ ಮತ್ತು 'ಸ್ವಾವಲಂಬಿ ಭಾರತ'ದ ದೊಡ್ಡ ಆಧಾರವೆಂದರೆ - ವೋಕಲ್ ಫಾರ್ ಲೋಕಲ್. ಯಾವ ವಸ್ತುಗಳು ಭಾರತದಲ್ಲಿ ತಯಾರಾಗಿವೆಯೋ, ಅದನ್ನು ತಯಾರಿಸಲು ಯಾವ ಭಾರತೀಯನು ಬೆವರು ಸುರಿಸಿದ್ದಾನೋ ಅಂಥಾ ವಸ್ತುಗಳನ್ನು ಮಾತ್ರ ಖರೀದಿಸಿ ಮತ್ತು ಮಾರಾಟ ಮಾಡಬೇಕು. ಇದು ನಮ್ಮ ಸಂಕಲ್ಪವಾಗಿರಬೇಕು ಎಂದು ಪ್ರಧಾನಿ ಕರೆ ನೀಡಿದರು.

ಧ್ವನಿ : ಪ್ರಧಾನಿ ನರೇಂದ್ರ ಮೋದಿ (೨೨ ಸೆಕೆಂಡ್‌ಗಳು)

ಈ ಹಿಂದೆ ಜಾರ್ಖಂಡ್‌ನ ಗುಮಲಾ ಜಿಲ್ಲೆಯು ಮಾವೋವಾದಿ ಹಿಂಸಾಚಾರಕ್ಕಾಗಿ ಹೆಸರಾಗಿದ್ದ ಕಾಲವೊಂದಿತ್ತು. ಬಾಸಿಯಾ ಬ್ಲಾಕ್‌ನ ಗ್ರಾಮ ನಿರ್ಜನವಾಗುತ್ತಿತ್ತು. ಜನರು ಭಯದ ನೆರಳಿನಲ್ಲೇ ಬದುಕುತ್ತಿದ್ದರು. ಉದ್ಯೋಗಾವಕಾಶದ ಸಾಧ್ಯತೆಯೇ ಕಂಡುಬರುತ್ತಿರಲಿಲ್ಲ. ಹೊಲಗಳು ಬೆಳೆ ಬೆಳೆಯದೆ ಒಣಗಿದ್ದವು. ಯುವಜನರು ವಲಸೆ ಹೋಗುತ್ತಿದ್ದರು. ಆದರೆ ನಂತರ ಒಂದು ಅತ್ಯಂತ ಶಾಂತ ಹಾಗೂ ಧೈರ್ಯದಿಂದ ತುಂಬಿದ ಬದಲಾವಣೆ ಆರಂಭವಾಯಿತು ಎಂದರು. ಓಂಪ್ರಕಾಶ್ ಸಾಹೂ ಹೆಸರಿನ ಯುವಕ ಹಿಂಸಾಚಾರದ ಮಾರ್ಗ ತೊರೆದು, ಮೀನು ಸಾಕಣೆ ಆರಂಭಿಸಿದರು. ತನ್ನಂತಹ ಕೆಲವು ಸ್ನೇಹಿತರನ್ನು ಕೂಡಾ ಈ ರೀತಿ ಮಾಡಲು ಪ್ರೇರೇಪಿಸಿದರು. ಅವರ ಇಂತಹ ಪ್ರಯತ್ನಕ್ಕೆ ಫಲಿತಾಂಶವೂ ದೊರೆಯಿತು. ಮೊದಲು ಬಂದುಕುಗಳನ್ನು ಹಿಡಿಯುತ್ತಿದ್ದ ಕೈಗಳು ಈಗ ಮೀನು ಹಿಡಿಯುವ ಬಲೆಗಳನ್ನು ಹಿಡಿದಿವೆ ಎಂದು ಪ್ರಧಾನಿ ಹೇಳಿದರು. ಇಂದು ಬಾಸಿಯಾ ಬ್ಲಾಕ್‌ನ ೧೫೦ಕ್ಕಿಂತಲೂ ಹೆಚ್ಚು ಕುಟುಂಬಗಳು ಮೀನು ಸಾಕಣೆಯಲ್ಲಿ ತಮ್ಮನ್ನು ತೊಡಗಿಸಿಕೊಂಡಿವೆ. ಒಂದು ಕಾಲದಲ್ಲಿ ನಕ್ಸಲೀಯ ಸಂಘಟನೆಯಲ್ಲಿದ್ದ ಅನೇಕರು ಈಗ ಗ್ರಾಮದಲ್ಲಿ ಗೌರವಾನ್ವಿತ ಜೀವನ ನಡೆಸುತ್ತಿದ್ದಾರೆ ಮತ್ತು ಇತರರಿಗೆ ಉದ್ಯೋಗವನ್ನೂ ನೀಡುತ್ತಿದ್ದಾರೆ ಎಂದು ಪ್ರಧಾನಿ ಹೇಳಿದರು. ಒಲಿಂಪಿಕ್ಸ್ ನಂತರ ಅತಿ ದೊಡ್ಡ ಕ್ರೀಡಾಕೂಟವೆಂದರೆ - 'ವರ್ಲ್ಡ್ ಪೊಲೀಸ್ ಅಂಡ್ ಫೈರ್ ಗೇಮ್'. ವಿಶ್ವಾದ್ಯಂತದ ಪೊಲೀಸ್ ಸಿಬ್ಬಂದಿ, ಅಗ್ನಿಶಾಮಕ ಸಿಬ್ಬಂದಿ, ಭದ್ರತೆ ಕ್ಷೇತ್ರಕ್ಕೆ ಸಂಬಂಧಿಸಿದ ವ್ಯಕ್ತಿಗಳ ನಡುವಿನ ಕ್ರೀಡಾ ಪಂದ್ಯಾವಳಿ. ಈ ಬಾರಿ ಈ ಕ್ರೀಡಾಕೂಟ ಅಮೆರಿಕಾದಲ್ಲಿ ನಡೆಯಿತು ಮತ್ತು ಇದರಲ್ಲಿ ಭಾರತ ಇತಿಹಾಸ ಸೃಷ್ಟಿಸಿತು ಎಂದರು. ಭಾರತ ಸುಮಾರು ೬೦೦ ಪದಕಗಳನ್ನು ಗೆದ್ದಿತು. ೭೧ ದೇಶಗಳ ಪೈಕಿ ನಾವು ಮೂರನೇ ಸ್ಥಾನಕ್ಕೆ ತಲುಪಿದೆವು. ಹಗಲು ರಾತ್ರಿ ದೇಶದ ರಕ್ಷಣೆಗೆಂದು ಸಿದ್ಧವಾಗಿ ನಿಂತಿರುವ ಈ

ಸಮವಸ್ತ್ರಧಾರಿಗಳ ಪರಿಶ್ರಮಕ್ಕೆ ಫಲ ದೊರೆತಿದೆ. ೨೦೨೯ ರಲ್ಲಿ ಈ ಕ್ರೀಡಾಕೂಟ ಭಾರತದಲ್ಲಿ ನಡೆಯಲಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದರು.

<><><><>

ಭಾರತ ತನ್ನ ಭದ್ರತೆ ಮತ್ತು ಸಾರ್ವಭೌಮತ್ವಕ್ಕೆ ಎದುರಾಗುವ ಯಾವುದೇ ಬೆದರಿಕೆಗೆ ಬಲವಾಗಿ ಪ್ರತಿಕ್ರಿಯಿಸುತ್ತದೆ ಎಂಬ ಸ್ಪಷ್ಟ ಸಂದೇಶವನ್ನು ಆಪರೇಷನ್ ಸಿಂಧೂರ ಜಗತ್ತಿಗೆ ರವಾನಿಸಿದೆ ಎಂದು ಪ್ರಧಾನಿ ನರೇಂದ್ರ ಮೋದಿ ಹೇಳಿದ್ದಾರೆ. ತಮಿಳುನಾಡಿನ ಅರಿಯಲೂರು ಜಿಲ್ಲೆಯಲ್ಲಿ ಇಂದು ನಡೆದ ಚೋಳ ಚಕ್ರವರ್ತಿ ಒಂದನೇ ರಾಜೇಂದ್ರ ಚೋಳರ ಜನ್ಮ ವಾರ್ಷಿಕೋತ್ಸವದ ಆದಿ ತಿರುವತಿರೈ ಹಬ್ಬದ ಸಮಾರೋಪ ಸಮಾರಂಭದಲ್ಲಿ ಭಾಗವಹಿಸಿ ಅವರು ಮಾತನಾಡಿದರು. ರಾಜ ರಾಜ ಚೋಳ ಮತ್ತು ರಾಜೇಂದ್ರ ಚೋಳ ಅವರ ಹೆಸರು ಭಾರತದ ಇತಿಹಾಸದಲ್ಲಿ ಅಚ್ಚಳಿಯದೇ ಉಳಿದಿವೆ. ಅವರ ಕಾರ್ಯಗಳು ಏಕ್ ಭಾರತ್ ಶ್ರೇಷ್ಠ ಭಾರತ್ ನ ಪ್ರಯತ್ನಗಳನ್ನು ಹೋಲುತ್ತವೆ ಎಂದು ಅವರು ಹೇಳಿದರು. ಭಾರತದ ಶ್ರೇಷ್ಠ ಚಕ್ರವರ್ತಿಗಳಲ್ಲಿ ಒಬ್ಬರಾದ ಒಂದನೇ ರಾಜೇಂದ್ರ ಚೋಳರ ಗೌರವಾರ್ಥವಾಗಿ ಪ್ರಧಾನಿಯವರು ನಾಣ್ಯ ಬಿಡುಗಡೆ ಮಾಡಿದರು. ಈ ಸಂದರ್ಭದಲ್ಲಿ ತಮಿಳುನಾಡು ರಾಜ್ಯಪಾಲ ಆರ್.ಎನ್.ರವಿ, ಕೇಂದ್ರ ವಾರ್ತಾ ಮತ್ತು ಪ್ರಸಾರ ಖಾತೆ ರಾಜ್ಯ ಸಚಿವ ಡಾ. ಎಲ್.ಮುರುಗನ್ ಉಪಸ್ಥಿತರಿದ್ದರು.  ಇದಕ್ಕೂ ಮುನ್ನ ಪ್ರಧಾನಿಯವರು ರೋಡ್ ಶೋ ನಡೆಸಿದರು.

<><><><>

ಬಿಹಾರದಲ್ಲಿ ಮತದಾರರ ಪಟ್ಟಿಯ ವಿಶೇಷ ಪರಿಷ್ಕರಣೆ ನಡೆಸುವ ಚುನಾವಣಾ ಆಯೋಗದ ನಿರ್ಧಾರವನ್ನು ಪ್ರಶ್ನಿಸಿ ಸಲ್ಲಿಸಲಾದ ಅರ್ಜಿಗಳನ್ನು ಸುಪ್ರೀಂ ಕೋರ್ಟ್ ನಾಳೆ ವಿಚಾರಣೆಗೆ ಕೈಗೆತ್ತಿಕೊಳ್ಳಲಿದೆ. ನ್ಯಾಯಮೂರ್ತಿಗಳಾದ ಸೂರ್ಯಕಾಂತ್, ಜಾಯ್‌ಮಲ್ಯ ಬಕ್ಚಿ ಅವರನ್ನೊಳಗೊಂಡ ನ್ಯಾಯಪೀಠವು ಈ ಪ್ರಕರಣವನ್ನು ಕೈಗೆತ್ತಿಕೊಳ್ಳುವ ನಿರೀಕ್ಷೆಯಿದೆ. ಮತದಾರರ ಪಟ್ಟಿಯಿಂದ ಅನರ್ಹ ಹೆಸರುಗಳನ್ನು ತೆಗೆದುಹಾಕುವ ಮೂಲಕ ಮತದಾರರ ಪಟ್ಟಿಯನ್ನು ಪರಿಷ್ಕರಿಸುವ ಗುರಿಯನ್ನು ಇದು ಹೊಂದಿದೆ ಎಂದು ಚುನಾವಣಾ ಆಯೋಗ ಹೇಳಿದೆ. ಈ ಹಿಂದಿನ ವಿಚಾರಣೆಯಲ್ಲಿ ನ್ಯಾಯಾಲಯವು, ಆಧಾರ್ ಕಾರ್ಡ್, ಮತದಾರರ ಗುರುತಿನ ಚೀಟಿ ಮತ್ತು ಪಡಿತರ ಚೀಟಿಗಳಂತಹ ದಾಖಲೆಗಳನ್ನು ಪರಿಶೀಲನೆ ವೇಳೆ ಸ್ವೀಕರಿಸುವಂತೆ ಚುನಾವಣಾ ಆಯೋಗಕ್ಕೆ ಸೂಚಿಸಿತ್ತು.

<><><>

ಉತ್ತರಾಖಂಡದ ಹರಿದ್ವಾರದ ಮಾನ್ಸಾ ದೇವಿ ದೇಗುಲದಲ್ಲಿ ಇಂದು ಸಂಭವಿಸಿದ ಕಾಲ್ತುಳಿತದಲ್ಲಿ ಕನಿಷ್ಠ ೮ ಮಂದಿ ಮೃತಪಟ್ಟಿದ್ದು, ಇತರೆ ೨೦ ಜನರು ಗಾಯಗೊಂಡಿದ್ದಾರೆ. ಹೈವೋಲ್ಟೇಜ್ ವಿದ್ಯುತ್ ತಂತಿಯು ಕಿತ್ತಿರಿದು ನೆರೆದಿದ್ದ ಜನಸಮೂಹದ ಮೇಲೆ ಬಿದ್ದ ಸಂದರ್ಭದಲ್ಲಿ ನೂಕುನುಗ್ಗಲು ಉಂಟಾಗಿ ಈ ದುರ್ಘಟನೆ ಸಂಭವಿಸಿದೆ. ಉತ್ತರಾಖಂಡ ಪೊಲೀಸ್, ರಾಜ್ಯ ವಿಪತ್ತು ನಿರ್ವಹಣಾ ಪಡೆ ಸೇರಿದಂತೆ ಇತರೆ ರಕ್ಷಣಾ ತಂಡಗಳು ಸ್ಥಳಕ್ಕೆ ಧಾವಿಸಿದ್ದು, ರಕ್ಷಣಾ ಕಾರ್ಯಚರಣೆಯಲ್ಲಿ ತೊಡಗಿವೆ. ಗಾಯಗೊಂಡವರನ್ನು ಸ್ಥಳೀಯ ಆಸ್ಪತ್ರೆಗೆ ದಾಖಲಿಸಲಾಗಿದ್ದು, ತೀವ್ರವಾಗಿ ಗಾಯಗೊಂಡವರಿಗೆ ಉನ್ನತ ವೈದ್ಯಕೀಯ ಸಂಸ್ಥೆಗಳಿಗೆ ಸ್ಥಳಾಂತರಿಸಲಾಗಿದೆ. ಈ ದುರ್ಘಟನೆಯಲ್ಲಿ ಮೃತಪಟ್ಟ ಕುಟುಂಬಗಳಿಗೆ ಪ್ರಧಾನಿ ನರೇಂದ್ರ ಮೋದಿ, ಉತ್ತರಾಖಂಡ ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ ಸಂತಾಪ ಸೂಚಿಸಿದ್ದು, ಗಾಯಗೊಂಡವರು ಶೀಘ್ರ ಗುಣಮುಖರಾಗಲೆಂದು ಹಾರೈಸಿದ್ದಾರೆ. ಇದೇ ವೇಳೆ ಘಟನೆ ಸಂಬಂಧ ನ್ಯಾಯಾಂಗ ತನಿಖೆಗೆ ಆದೇಶಿಸಿರುವ ಮುಖ್ಯಮಂತ್ರಿ ಪುಷ್ಕರ್‌ಸಿಂಗ್ ಧಾಮಿ, ಮೃತ ಕುಟುಂಬಗಳಿಗೆ ತಲಾ ೨ ಲಕ್ಷ ರೂಪಾಯಿ ಹಾಗೂ ಗಾಯಗೊಂಡವರಿಗೆ ತಲಾ ೫೦ ಸಾವಿರ ರೂಪಾಯಿ ಪರಿಹಾರ ಘೋಷಿಸಿದ್ದಾರೆ.

<><><>

ಪ್ರಧಾನಿ ನರೇಂದ್ರ ಮೋದಿಯವರ ದೃಢ ಸಂಕಲ್ಪ ಮತ್ತು ನಾಗರಿಕರ ಬೆಂಬಲವು ಪ್ರಪಂಚದಾದ್ಯಂತ ಭಯೋತ್ಪಾದನೆಯ ಬಗ್ಗೆ ಶೂನ್ಯ ಸಹಿಷ್ಣುತೆಯ ಸಂದೇಶವನ್ನು ರವಾನಿಸಿದೆ ಎಂದು ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದಾರೆ. ನವದೆಹಲಿಯಲ್ಲಿ ನಡೆದ ೮ನೇ ರಾಷ್ಟ್ರೀಯ ಭದ್ರತಾ ಕಾರ್ಯತಂತ್ರಗಳ ಸಮ್ಮೇಳನವನ್ನು ಉದ್ದೇಶಿಸಿ ಮಾತನಾಡಿದ ಅವರು, ಭಾರತದ ಹೆಚ್ಚುತ್ತಿರುವ ಸ್ಥಾನಮಾನವು ಮುಂಬರುವ ವರ್ಷಗಳಲ್ಲಿ ರಾಷ್ಟ್ರೀಯ ಭದ್ರತಾ ಸವಾಲುಗಳನ್ನು ಹೆಚ್ಚಿಸಲು ಕಾರಣವಾಗುತ್ತದೆ ಎಂದರು.

<><><>

ಭಾರತ-ಇಂಗ್ಲೆಂಡ್ ನಡುವೆ ನಡೆಯುತ್ತಿರುವ ಆಂಡರ್ಸನ್-ತೆಂಡೂಲ್ಕರ್ ಟ್ರೋಫಿಯ ನಾಲ್ಕನೇ ಟೆಸ್ಟ್ ಕ್ರಿಕೆಟ್‌ನ ಕೊನೆಯ ದಿನವಾದ ಇಂದು ತನ್ನ ೨ನೇ ಇನ್ನಿಂಗ್ಸ್‌ನಲ್ಲಿ ಭಾರತ ಇತ್ತೀಚಿನ ವರದಿ ಬಂದಾಗ ೪ ವಿಕೆಟ್ ನಷ್ಟಕ್ಕೆ ೨೮೯ ರನ್‌ಗಳಿಸಿ ಆಡುತ್ತಿದೆ. ಮೊದಲ ಇನ್ನಿಂಗ್ಸ್‌ನಲ್ಲಿ ಭಾರತ ೩೫೮

ರನ್ ಗಳಿಸಿದೆ. ಇದಕ್ಕೆ ಉತ್ತರವಾಗಿ ಇಂಗ್ಲೆಂಡ್ ತಂಡ ತನ್ನ ಮೊದಲ ಇನ್ನಿಂಗ್ಸ್‌ನಲ್ಲಿ ೬೬೯ ರನ್ ಗಳಿಸಿದೆ.

<><> ಇಲ್ಲಿಗೆ ವಾರ್ತಾ ಪ್ರಸಾರ ಮುಕ್ತಾಯವಾಯಿತು <><>